## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬೆಣ್ಣಿಹಳ್ಳದ ಉಪನದಿಯಾದ ತುಪ್ಪರಿಹಳ್ಳಕ್ಕೆ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಕಾಮಗಾರಿಗಳ ರೂ.312.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**

1 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪತ್ರ ಸಂಖ್ಯೆ:ಕನೀನಿ/ ಮಯೋವ/ ತುಪ್ಪರಿಹಳ್ಳ/ 91/2021/2170, ದಿನಾಂಕ:07.08.2021

2 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ:ಕನೀನಿ/ ಮಯೋವ/ ತುಪ್ಪರಿಹಳ್ಳ/ 91/2021/ 6003, ದಿನಾಂಕ:08.02.2022

***

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರು ತುಪ್ಪರಿಹಳ್ಳವು ಬೆಣ್ಣಿಹಳ್ಳದ ಉಪನದಿಗಳಲ್ಲಿ ಒಂದಾಗಿದ್ದು, ಬೆಣ್ಣಿಹಳ್ಳವು ಮಲಪ್ರಭಾ ನದಿಯ ಮುಖ್ಯ ಉಪನದಿಯಾಗಿದೆ; ತುಪ್ಪರಿಹಳ್ಳವು ಬೆಣ್ಣಿಹಳ್ಳದ ಮುಖ್ಯ ಉಪನದಿಯಾಗಿದ್ದು, ಇದು ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಕಿತ್ತೂರು ಸಮೀಪದ ಅವರಾದಿ ಗ್ರಾಮದ ಹತ್ತಿರ ಉಗಮವಾಗಿ ತೇಗೂರು, ಸಿಂಗನಹಳ್ಳಿ, ಗರಗ, ಲೋಕೂರು, ಕಬ್ಬೇನೂರು, ಹೊಂಡಿ, ಮೊರಬ, ಶಿರಕೊಳ ಮತ್ತು ಹಲಗವಾಡಿ ಮೂಲಕ ಹರಿದು ನವಲಗುಂದ ತಾಲ್ಲೂಕಿನ ಹತ್ತಿರ ಬೆಣ್ಣಿಹಳ್ಳಕ್ಕೆ ಸೇರುತ್ತದೆ. ತುಪ್ಪರಿಹಳ್ಳದ ಒಟ್ಟು ಉದ್ದ 95.00 ಕಿಮೀ ಕ್ಕಿಂತ ಜಾಸ್ತಿ ಇದ್ದು ಇದರಲ್ಲಿ 78 ಕಿ.ಮೀ ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ 138 ಗ್ರಾಮಗಳನ್ನು ಮತ್ತು 52 ಕಿಮೀ ಗದಗ ಜಿಲ್ಲೆಯಲ್ಲಿ 72 ಗ್ರಾಮಗಳನ್ನು ಒಳಗೊಂಡಿದೆ ತುಪ್ಪರಿಹಳ್ಳಕ್ಕೆ ಸುಮಾರು 49 ಉಪಹಳ್ಳಗಳು ಸೇರುತ್ತಿದ್ದು, ಈ ಪೈಕಿ ಚಿಕ್ಕಹಳ್ಳ, ಕಳ್ಳಹಳ್ಳ, ಬನ್ನಿಹಳ್ಳ, ಹುಣಸಿಕಟ್ಟೆಹಳ್ಳ ಮತ್ತು ಗಡ್ಡನ್ನ್ಯ ಹಳ್ಳಗಳು ಪ್ರಮುಖ ಉಪಹಳ್ಳಗಳಾಗಿರುತ್ತವೆ; ತುಪ್ಪರಿಹಳ್ಳಕ್ಕೆ ಒಟ್ಟಾರೆ 1288.60 Sq.Km. ಜಲಾನಯನ ಪ್ರದೇಶವಿದ್ದು, ಸದರಿ ಪ್ರದೇಶದಲ್ಲಿ ಮಳೆಗಾಲದ ಅವಧಿಯಲ್ಲಿ ಸರಾಸರಿ 572 ಮೀ.ಮೀ ಮಳೆಯಾಗುವುದಲ್ಲದೇ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಸಹ ಅನಿರೀಕ್ಷಿತ ಮಳೆಯಾಗುತ್ತಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಪ್ರತಿ ವರ್ಷವು ಮಳೆಗಾಲದಲ್ಲಿ ಮತ್ತು ಅನಿರೀಕ್ಷಿತ ಭಾರಿ ಮಳೆಯಾದಲ್ಲಿ, ನದಿಯು ಉಕ್ಕಿ ಹರಿದು ನದಿಪಾತ್ರದ ಪ್ರದೇಶಗಳು ಜಲಾವೃತವಾಗುತ್ತವೆ; ಈ ಹಿನ್ನೆಲೆಯಲ್ಲಿ ತುಪ್ಪರಿಹಳ್ಳದ ಸುತ್ತಮುತ್ತಲಿನ ಗ್ರಾಮಗಳನ್ನು ಹಾಗೂ ಜಮೀನುಗಳನ್ನು ತುಪ್ಪರಿಹಳ್ಳದ ಪ್ರವಾಹದಿಂದ ಸಂರಕ್ಷಿಸಲು ತುಪ್ಪರಿಹಳ್ಳಕ್ಕೆ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ; ಸದರಿ ಯೋಜನೆಯಡಿ ತುಪ್ಪರಿಹಳ್ಳದ ಸುತ್ತಮುತ್ತಲಿನ ಗ್ರಾಮಗಳ ವಸತಿ ಪ್ರದೇಶದ ಸಮೀಪದಲ್ಲಿ (Habitation) ಕಾಂಕ್ರಿಟ್ ತಡೆಗೋಡೆ ನಿರ್ಮಿಸಲು, ಇತರೆ ಪ್ರದೇಶಗಳಲ್ಲಿ ಮಣ್ಣಿನ ಏರಿಗಳನ್ನು (Earthen embankment) ಹಾಗೂ ಅವಶ್ಯವಿರುವ ಸ್ಥಳಗಳಲ್ಲಿ 5 ಸೇತುವೆಗಳನ್ನು ನಿರ್ಮಿಸಲು ಯೋಜಿಸಲಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿರವರು ವರದಿ ಮಾಡಿರುತ್ತಾರೆ.

ದಿನಾಂಕ:23.07.2021 ರಂದು ಜರುಗಿದ ಕರ್ನಾಟಕ ನೀರಾವರಿ ನಿಗಮದ 96ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ, ದಿನಾಂಕ:11.06.2021 ರಂದು ಜರುಗಿದ ನಿಗಮದ 83ನೇ ಅಂದಾಜು ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಬೆಣ್ಣಿಹಳ್ಳದ ಉಪನದಿಯಾದ ತುಪ್ಪರಿಹಳ್ಳಕ್ಕೆ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಅವಶ್ಯವಿರುವುದರಿಂದ ರೂ. 312.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಅನುಮೋದನೆ ನೀಡಿತು ಮತ್ತು ಇದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿರವರು ವರದಿ ಮಾಡಿರುತ್ತಾರೆ.

ಮುಂದುವರೆದು, ಮೇಲೆ ಓದಲಾದ (2)ರ ಪತ್ರದಲ್ಲಿ, ಪ್ರಸ್ತುತ ಮುಂಬರುವ ಬೇಸಿಗೆ ಕಾಲದಲ್ಲಿ working period ಲಭ್ಯವಿದ್ದು, ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಕಾಮಗಾರಿಗಳನ್ನು ಕೈಗೊಂಡಲ್ಲಿ ತುಪ್ಪರಿ ಹಳ್ಳದ ಸುತ್ತಮುತ್ತಲಿನ ಗ್ರಾಮಗಳನ್ನು ಹಾಗೂ ಜಮೀನುಗಳನ್ನು ತುಪ್ಪರಿಹಳ್ಳದ ಪ್ರವಾಹದಿಂದ ಸಂರಕ್ಷಿಸಲು ಸಾಧ್ಯವಾಗುವುದು; ಆದ್ದರಿಂದ, ಬೆಣ್ಣಿಹಳ್ಳದ ಉಪನದಿಯಾದ ತುಪ್ಪರಿಹಳ್ಳಕ್ಕೆ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಕಾಮಗಾರಿಗಳ ರೂ.312.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 36 ಎಂಪಿಜಡ್ 2021,ಬೆಂಗಳೂರು,ದಿನಾಂಕ:19.03.2022**

ಬೆಣ್ಣಿಹಳ್ಳದ ಉಪನದಿಯಾದ ತುಪ್ಪರಿಹಳ್ಳಕ್ಕೆ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆಯ ಯೋಜನೆಯನ್ನು 2 ಹಂತಗಳಲ್ಲಿ ಕೈಗೆತ್ತಿಗೊಂಡು ಮೊದಲನೇ ಹಂತದಲ್ಲಿ ರೂ.150.00 ಕೋಟಿಗಳಿಗೆ ಮೀರದಂತೆ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸುವ ಷರತ್ತಿಗೊಳಪಟ್ಟು ಸದರಿ ಯೋಜನೆಯ ರೂ.312.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 376 ಆಕೋ-1/2021 (ಇ-ಆಫೀಸ್), ದಿನಾಂಕ: 10.03.2022 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿಎಸ್ 24 ಎಂಸಿಎಂ 2021-ಪಿಪಿಡಿ, ದಿನಾಂಕ:04.09.2021 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

19/3/2022
**(ರವೀಂದ್ರ ಕೊಂಡ)**
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5),
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು (ಎ&ಇ) / (ಇ&ಆರ್.ಎಸ್.ಎ)/(ಜಿ.&ಎಸ್.ಎಸ್.ಎ)ಕರ್ನಾಟಕ ಬೆಂಗಳೂರು.
2. ಮಾನ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು .
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜ.ಸಂ.ಇಲಾಖೆ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ
6. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ
7. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು,
9. ಮುಖ್ಯ ಇಂಜಿನಿಯರ್, ಕನೀನಿನಿ, ಮಲಪ್ರಭಾ ಯೋಜನಾ ವಲಯ, ಧಾರವಾಡ .
10. ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು, (ಲೋಇ-ಆಕೋ) ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ) , ವಿಧಾನಸೌಧ, ಬೆಂಗಳೂರುರವರಿಗೆ ಪ್ರಕರಣ ಸಂಖ್ಯೆ ಸಿ:154/2022, ದಿನಾಂಕ:11.03.2022ರನ್ವಯ.
12. ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ), ಜಲ ಸಂಪನ್ಮೂಲ ಇಲಾಖೆ.
13. ತಾಂತ್ರಿಕ ಸಹಾಯಕರು-6, ಜಲ ಸಂಪನ್ಮೂಲ ಇಲಾಖೆ .
14. ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ.